# ಪಾಠ – 8

## ಸ್ತ್ರೀ ಮೂಲದ ಜನನ – ದೋಷಪರಿಹಾರ ಮತ್ತು ನರಾವತಾರ

**ಮೂಲ : ಬ್ರೂಸ್. ಎನ್. ಕ್ಯಾಮರನ್. ಜೆ.ಡಿ.   ಅನುವಾದ : ಪಾಸ್ಟರ್ ಚೆಲುವರಾಜು**

**ಪೀಠಿಕೆ :–** ಕ್ರೈಸ್ತ ಧರ್ಮ "ಚಿಂತಕರ ಧರ್ಮ"ವೆಂದು ಕಳೆದೆರೆಡು ವಾರಗಳಿಂದ ಕಲಿತೆವು. ಆದರೆ ಆ ಚಿಂತನೆ ಎಂಬುದು ಎಷ್ಟು ಕಷ್ಟ ಎಂಬುದನ್ನು ಕುರಿತು ನಾವು ಕಲಿಯಲಿಲ್ಲ! ಒಂದು ಅರ್ಥದಲ್ಲಿ ಹಳೆಯ ಒಡಂಬಡಿಕೆಯ ವ್ಯವಸ್ಥೆಯ ಪಾಪಪರಿಹಾರ – ಯೇಸುಸ್ವಾಮಿಯ ಮರಣ, ಪುನರುತ್ಥಾನ ಮತ್ತು ಅವರ ಪರಲೋಕದ ಗುಡಾರ ಸೇವೆಯೊಂದಿಗೆ ಹೊಂದಿಕೊಂಡು ಹೋಗುವುದನ್ನು ಬಹಳ ಸುಲಭವಾಗಿಯೂ ಮತ್ತು ತಾರ್ಕಿಕವಾಗಿಯೂ ವಿವರಿಸಬಹುದು. ಈ ವಿವರಣೆ ತುಂಬಾ ತಾರ್ಕಿಕವಾಗಿ ತಾಳೆಹೊಂದುತ್ತವೆ. ಅದೇ ಸಮಯದಲ್ಲಿ, ಸೃಷ್ಟಿ ಕರ್ತನಾದ ದೇವರು, ತನ್ನನ್ನು ತಗ್ಗಿಸಿಕೊಂಡವನಾಗಿ ಮಾನವ ರೂಪದಲ್ಲಿ ಈ ಭೂಲೋಕಕ್ಕೆ ಬಂದದ್ದನ್ನು ಅರ್ಥಮಾಡಿಕೊಳ್ಳುವದು ಅಷ್ಟು ಸುಲಭವಲ್ಲ. "ದೇವರ – ಸ್ತ್ರೀ ಮೂಲದ ಜನನ"ದ ಮುಖಾಂತರ ದೇವರು ಅಥವಾ ಜೀವಮಾನವನೊಬ್ಬನ ಸೃಷ್ಟಿಯಲ್ಲಿರುವ ತಾಂತ್ರಿಕತೆಯನ್ನು ಗ್ರಹಿಸಿಕೊಳ್ಳುವಿದೆಯಲ್ಲ ಅದು ಬಲುಕಷ್ಟ. ಆದರೂ ಆಳವಾದ ಸತ್ಯವೇದ ಅಧ್ಯಾಯನದ ಮೂಲಕ ಈ ವಿಷಯವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಮಾಡೋಣ.

### I. ಕನ್ಯೆ ಮರಿಯಳು :

ಅ) **ಲೂಕ 1:26–28ನ್ನು ಓದಿಕೊಳ್ಳಿರಿ**. ನಿಮ್ಮ ಮದುವೆ ನಿಶ್ಚಿತಾರ್ಥ ದಿನ ನಿಮ್ಮ ಸ್ಮರಣೆಯಲ್ಲಿದೆಯೇ? ಅಂದಿನ ಅನುಭವಗಳು ಈಗ ಹೇಗನ್ನಿಸುತ್ತವೆ? [ಅಂದಿನ ಪ್ರೇಮಮಯ ಜೀವನದ ಭಾವನೆಗಳು ಇಂದಿಗೂ ಮಧುರವೆನಿಸಿದರೂ, ಜೀವನದ ಮುಂದಿನ ಸದಾವಕಾಶಗಳೇನು ಎಂಬ ಭಾವನೆಗಳು ಅಷ್ಟೇ ಕಾಡಿರಲಿಕ್ಕೂ ಸಾಕು]

ಆ) ದೇವರಿಂದ ಕಳುಹಿಸಲ್ಪಟ್ಟ ಗಬ್ರಿಯೇಲ ದೇವದೂತನು ಧುತ್ತನೆ ನಿಮ್ಮೆದುರಿಗೆ ಬಂದು ನಿಂತರೆ ನಿಮಗೆ ಏನನ್ನಿಸುತ್ತದೆ?

**ಲೂಕ 1:29ನ್ನು ಓದಿಕೊಳ್ಳಿ**. ಮರಿಯಳು ಗಬ್ರಿಯೇಲನ ಶುಭಾಶಯಗಳಿಗೆ ಪ್ರತಿಕ್ರಿಯಿಸಿದ್ದು ಹೇಗೆ? ಹಾಗೇಕೆ ಪ್ರತಿಕ್ರಿಯೆ ಮಾಡಿದಳು? [ಒಬ್ಬ ಯೌವನಸ್ಥ ಕನ್ಯೆಗೆ ಇದೊಂದು ಅತಿಶಯವಾದ ಶುಭ ಹಾರೈಕೆಯಾಗಿತ್ತು. ಅವಳು ಇಂಥಹ ಶುಭಾಶಯಗಳಿಗೆ ಅರ್ಹಳೇಕೆ?

ಬಹುಶಃ ಇದೊಂದು ಒಣ ಮಾತಿನ ಹೊಗಳಿಕೆ ಎಂದು ಮರಿಯಳು ನೆನೆಸಿದಳೇ? ತನ್ನಿಂದೇನೂ ಈ ದೂತನಿಗೆ ಕಾರ್ಯವಾಗಬೇಕಾಗಿದೆಯೆಂದು ಆಕೆ ಬಗೆದಳೇ?

i) ಅದು ಒಣಮಾತಿನ ಹೊಗಳಿಕೆಯಾಗಿತ್ತೇ? [ಇಲ್ಲ! ತಂದೆಯಾದ ದೇವರು, ಯೇಸುಸ್ವಾಮಿಗೆ ಮಾನವ ರೂಪವನ್ನು ಕೊಡುತ್ತಿದ್ದಾರೆ ಮತ್ತು ಆ ಸಲುವಾಗಿ ಅದರು ಮರಿಯಳನ್ನು ಆರಿಸಿಕೊಂಡಿದ್ದಾರೆ. ಇಲ್ಲ ಒಣಮಾತಿನ ಹೊಗಳಿಕೆಗೆ ಅವಕಾಶವೆಂಬುದೇ ಇಲ್ಲ.]

ಇ) **ಲೂಕ 1:30–34ನ್ನು ಓದಿಕೊಳ್ಳಿ**. ಗಬ್ರಿಯೇಲನ ಈ ಮಾತುಗಳಲ್ಲಿ ಮರಿಯಳ ಗಮನ ಸೆಳೆದಿದ್ದು ಯಾವುದು? [ಆಕೆಗೆ ಮದುವೆ ಆಗಿರಲಿಲ್ಲ. ಗಬ್ರಿಯೇಲನ, "ಇಗೊ, ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ" ಎಂಬು ಮಾತನ್ನು ಕೇಳಿ ಆಶ್ಚರ್ಯಕ್ಕೊಳಗಾಗಿ ಉಳಿದ ಮಾತುಗಳನ್ನು ಕೇಳಿಸಿಕೊಂಡಳೋ, ಏನೋ, ತಿಳಿಯದು.]

ಈ) **ಲೂಕ 1 : 35–37ನ್ನು ಓದಿಕೊಳ್ಳಿರಿ.** ನೀವು ಮರಿಯಳಾಗಿದ್ದರೆ, ನಿಮ್ಮ ಪ್ರಶ್ನೆಗೆ ಇದು ತಕ್ಕ ಉತ್ತರ ಎನಿಸುತ್ತಿತ್ತೇ?

1) ದೇವದೂತನ ವಿವರಣೆ ನಿನಗೆ ಅರ್ಥವಾಯಿತೇ?

2) ಇದನ್ನು ಅರ್ಥಮಾಡಿಕೊಳ್ಳಲು ಗಬ್ರಿಯೇಲರ ಮಾತುಗಳಲ್ಲಿರುವ ಬಹು ಮುಖ್ಯ ಅಂಶವೇನು? (ಮಾನವನ ಅನುಭವಕ್ಕೆ ಬಾರದ ಸಂಗತಿಯೊಂದನ್ನು ಆಕೆಯ ಮುಂದಿಡುತ್ತಿದ್ದೇನೆ ಎಂದು ಗಬ್ರಿಯೇಲನಿಗೆ ಗೊತ್ತು. ಸಾಲದಕ್ಕೆ ಆತ ಮತ್ತೊಂದು ಅದ್ಭುತ ಕಾರ್ಯವನ್ನು ಉಲ್ಲೇಖಿಸುತ್ತಿದ್ದಾನೆ (ಅದು ವೃದ್ಧೆ ಎಲಿಜಬೇತಳು ಗರ್ಭಧರಿಸಿದ್ದನ್ನು ಕುರಿತದ್ದು.) ಈ ಎಲ್ಲಾ ಅದ್ಭುತಗಳ ಹಿಂದಿರುವ ಶಕ್ತಿಯನ್ನು ಕುರಿತು, "ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾಗಿರುವದಿಲ್ಲ" ಎಂದು ಸಹ ಹೇಳಿದ್ದಾನೆ. ಇದು ದೇವರಿಂದ ಆಗದ ಕಾರ್ಯ ಎಂದು ನಿಮಗನ್ನಿಸುತ್ತದೆಯೇ? ಬರೀ ಬಾಯಿ ಮಾತಿನಿಂದಲೇ ಈ ಲೋಕವನ್ನು ಆತ ಸೃಷ್ಟಿಮಾಡಿದ್ದನ್ನು ಜ್ಞಾಪಕಮಾಡಿಕೊಳ್ಳಿ].

ಉ) ಮರಿಯಳನ್ನೂ ತಾನು ಗಮನಿಸಿದ ಮೊದಲ ಸಂಗತಿಯಲ್ಲಿ ಮಗ್ನಳಾಗಿರುವಾಗ, ನಾವು ಗಬ್ರಿಯೇಲನ ಇತರೇ ಮಾತುಗಳೆಡೆ ಈಗ ನಮ್ಮ ಗಮನ ಹರಿಸೋಣ. ಮತ್ತೊಮ್ಮೆ **ಲೂಕ 1:31–33ನ್ನು ಓದಿಕೊಳ್ಳಿ**. ಯೇಸುಸ್ವಾಮಿಯನ್ನು ಕುರಿತು ಇಲ್ಲಿ ಹೇಳಿರುವದೇನು? ಯೇಸುಸ್ವಾಮಿ ದೇವರು ಎಂದು ಇಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆಯೇ?

1) ಈ ವಾಕ್ಯಗಳು, "ದೇವರ ಕುಮಾರನು" ಎಂದು ಹೇಳುವದಕ್ಕೆ ಬದಲು "ಪರಾತ್ಪರನ ಕುಮಾರನೆನಿಸಿಕೊಳ್ಳುವನು" ಎಂದು ಹೇಳಿರುವುದೇಕೆ? [ಯೇಸುಸ್ವಾಮಿಯ ಸ್ಥಾನಮಾನ ಗಬ್ರಿಯೇಲನಿಂದ ಪ್ರಕಟಿಸಲ್ಪಟ್ಟಿರುವದು ಮಾತ್ರವಲ್ಲ, ಆದರೆ ಮಾನವರೆಲ್ಲರು ಅದನ್ನು ಗುರುತಿಸಿ ತಿಳಿಯತ್ತಾರೆ.

2) **ರೋಮ 1:1-4ನ್ನು ಓದಿಕೊಳ್ಳಿ**. ಜನರು ಯೇಸುಸ್ವಾಮಿಯನ್ನು "ದೇವರ ಮಗನು" ಎಂದು ಕರೆಯುವುದೇಕೆ? [ಹಳೆಯ ಒಡಂಬಡಿಕೆಯ ಪ್ರವಾಸನೆಯ ಕಾರಣದಿಂದ ಮಾತ್ರವಲ್ಲ, ಅಥವಾ ಅವರ ಹುಟ್ಟಿನ ಅದ್ಭುತದಿಂದ ಮಾತ್ರವಲ್ಲ, ಅವರಿಗಿದ್ದ ಶಕ್ತಿಯನ್ನು ಅವರು ಸತ್ತು ಎದ್ದು ಬಂದದ್ದರಲ್ಲೂ ಕಂಡು ಬರುತ್ತದೆ. ಯೇಸುಸ್ವಾಮಿಯನ್ನು "ದೇವರ ಮಗ"ನೆಂದು ಕರೆಯಲು ಅನೇಕ ಕಾರಣಗಳಿವೆ.]

ಊ) **ಲೂಕ 1:38ನ್ನು ಓದಿಕೊಳ್ಳಿ.** ಈ ಆಶ್ಚರ್ಯಚಕಿತವಾದ ಹಾಗೂ ಹಿಂದೆಂದೂ ಕಂಡುಕೇಳರಿಯದ ಸಂಗತಿಯನ್ನು ಕೇಳಿ ಮರಿಯಳು ಹೇಗೆ ಪ್ರತಿಕ್ರಿಯಿಸಿದಳು. ನಾನು ಮೊದಲೇ ಕೇಳಿದ – ನಿಮ್ಮ ನಿಶ್ಚಿತಾರ್ಥ ದಿನದ ನೆನಪಿನ ಅನುಭವಗಳನ್ನು ಮತ್ತೆ ಜ್ಞಾಪಿಸಿಕೊಳ್ಳಿ. ಇಂಥಹ ಕಾರ್ಯ ನಿಮ್ಮ ನಿರೀಕ್ಷೆಗಳನ್ನು, ಕನಸುಗಳನ್ನು ಮತ್ತು ಯೋಜನೆಗಳನ್ನು ಬದಲಾಯಿಸುವದು ಹೇಗೆ? [ಮರಿಯಳು ತನ್ನ ಜೀವಿತವನ್ನು ದೇವರ ಚಿತ್ತ ನೆರವೇರಲು ಒಪ್ಪಿಸಿಕೊಟ್ಟಳು. ದೇವರು ಅವಳ ಬಗ್ಗೆ ದೊಡ್ಡ ಮಾತುಗಳನ್ನಾಡಿದ್ದರೆ ಅದರಲ್ಲಿ ಆಶ್ಚರ್ಯಪಡುವುದೇನಾದರೂ ಇದೆಯೇ?

## II. ದೇವ ಮಾನವ

ಅ) ಮೇಲಿನ ಪೀಠಿಕೆಯನ್ನು ಆಧಾರಿಸಿ, ಯೇಸುಸ್ವಾಮಿಯನ್ನು ನೀವು ಏನೆಂದು ಕರೆಯುವಿರಿ? ಅರ್ಧ ಮನುಷ್ಯ – ಅರ್ಧ ದೇವರು ಎಂದೇ? [**ಕೊಲೊಸೆ 2:9ನ್ನು** ಓದಿಕೊಳ್ಳಿರಿ. "ದೇವರ ಸರ್ವ ಸಂಪೂರ್ಣತೆಯು" ಮಾನವ ರೂಪದಲ್ಲಿ ಅವತರಿಸಿತೆಂದು ಸತ್ಯವೇದ ಹೇಳುತ್ತದೆ. ಯೇಸುಸ್ವಾಮಿ ಸಂಪೂರ್ಣವಾಗಿ ದೇವರಾಗಿದ್ದರು.]

ಆ) **ಇಬ್ರೀಯ 1:1-3 ಮತ್ತು ಇಬ್ರೀಯ 5:7-10ನ್ನು ಓದಿಕೊಳ್ಳಿ.** ಈ ಎರಡು ವರ್ಣನೆಗಳನ್ನು ಒಂದುಗೂಡಿಸಬಲ್ಲಿರಾ? ಒಂದು ವಾಕ್ಯ ಹೇಳುತ್ತದೆ: "ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ" ಎಂದು ಹೇಳಿದರೆ, ಮತ್ತೊಂದು ವಾಕ್ಯ "ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. [ತನಗೆ ವಿಧೇಯರಾಗಿವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು]." ಒಂದು ವಾಕ್ಯ ಆತ ಸಂಪೂರ್ಣ ದೇವರು ಎಂಬರ್ಥದಲ್ಲಿದ್ದರೆ, ಮತ್ತೊಂದು ಆತ ಸಂಪೂರ್ಣ ಮನುಷ್ಯ ಎಂಬ ಅರ್ಥ ಕೊಡುವಂತಿದೆ. ಆದ್ದರಿಂದಲೇ

ಯೇಸುಸ್ವಾಮಿ ಸಂಪೂರ್ಣ ದೇವರು ಮತ್ತು ಸಂಪೂರ್ಣ ಮನುಷ್ಯ ಎನ್ನುವ ಉತ್ತರ ಸರಿ ಎಂದೆನಿಸುತ್ತದೆ.

ಇ) **1ನೇ ಕೊರಿಂಥ 15:45-47ನ್ನು ಓದಿಕೊಳ್ಳಿ.** ಆದಾಮ ಮತ್ತು ಯೇಸುಸ್ವಾಮಿಯ ನಡುವೆ ಯಾವುದಾದರೂ ತಾರ್ಕಿಕ ಕೊಂಡಿ ಇದೆಯೇ? [1 **ಕೊರಿಂಥ 15:48-49ನ್ನು ಓದಿಕೊಳ್ಳಿ.** ಕ್ರೈಸ್ತೀಯ ಜೀವನ ಆ ಕೊಂಡಿಯನ್ನು ಪ್ರದರ್ಶಿಸುತ್ತದೆ. ನಾವು ನಮ್ಮ ಜೀವನವನ್ನು ಮಾನವರಾಗಿ (ಆದಾಮನಾಗಿ) ಆರಂಭಿಸುತ್ತೇವೆ ಮತ್ತು ಅಂತ್ಯದಲ್ಲಿ ಯೇಸುಸ್ವಾಮಿಯವರ ಮೂಲಕ ನಿತ್ಯವಾಗಿ ಜೀವಿಸಲು ಪುನರುತ್ಥಾನಗೊಳ್ಳುತ್ತೇವೆ.

## III. ದೀಕ್ಷಾಸ್ನಾನ ತೆಗೆದುಕೊಂಡ ಮಾನವ

ಅ) **ಮತ್ತಾಯ 3:13-14ನ್ನು ಓದಿಕೊಳ್ಳಿ.** ಇಲ್ಲಿ ಯಾರ ವಾಗ್ವಾದ ಉತ್ತಮವಾಗಿದೆ? ಯೇಸುಸ್ವಾಮಿಯದೋ? ಅಥವಾ ಸ್ನಾನಿಕ ಯೋಹಾನನದೋ? [ಸಹಜವಾಗಿ ಯೋಹಾನದೆಂದೇ ಹೇಳಬೇಕು. ಪಾಪರಹಿತ ಯೇಸುಸ್ವಾಮಿ ಮತ್ತೆ ಹುಟ್ಟಬೇಕಾದ್ದು ಯಾಕೆ? ಆತನ ಮೊದಲ ಜನನದ ಶ್ರೇಷ್ಠತೆಯನ್ನು ಕುರಿತು ಏನು ಹೇಳುತ್ತೀರಿ?

ಆ) ಮತ್ತಾಯ 3:15ನ್ನು ಓದಿಕೊಳ್ಳಿ. ಒಂದು ನಿಮಿಷ ತಡೆಯಿರಿ. ಯೇಸುಸ್ವಾಮಿಯವರ ತರ್ಕವೇನು? ಅವರ ತರ್ಕ ಸ್ನಾನಿಕ ಯೋಹಾನನ್ನು ಒಡಂಬಡಿಸಿತು. ಅದು ನಿಮ್ಮನ್ನೂ ಒಡಂಬಡಿಸಿದೆಯೇ? ಎರಡು ವಾರಗಳ ಹಿಂದೆ "ದೊಡ್ಡದರಲ್ಲಿ ಸಣ್ಣದರ ಐಕ್ಯತೆಯನ್ನು ಕುರಿತು ಮಾತನಾಡಿದ್ದನ್ನು ಜ್ಞಾಪಿಸಿಕೊಳ್ಳಿ. ಯೇಸುಸ್ವಾಮಿ ಮಡಿದಾದ ಆತನ್ನೊಂದಿಗೆ ನಾವು ಮಡಿದೆವು. ನಮ್ಮ ಪಾಪಗಳಿಗಾಗಿ ನಾವು ಯೇಸುಸ್ವಾಮಿಯ ಮೂಲಕ ಮರಣಿಸಿದ್ದೇವೆ. ಈ ಆಲೋಚನೆಯನ್ನೇ ಯೇಸುಸ್ವಾಮಿ ಮಾತನಾಡಿದ್ದಾರೆ. ಅವರಿಗೆ ದೀಕ್ಷಾಸ್ನಾನ ಆದಾಗಲೇ ನಮಗೂ ದೀಕ್ಷಾಸ್ನಾನವಾಯಿತು. ಈ ಅರ್ಥದಲ್ಲಿ ತಾನೇ ಯೇಸುಸ್ವಾಮಿ, "ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದಾಗಿದೆ ಎಂದು ಹೇಳಿರುವದು.

1) ಇಂಥಹ ಐಕ್ಯತಾ ಮನೋಭಾವದಲ್ಲಿ ಏನೋ ತಪ್ಪಿದೆ ಎಂದೆನಿಸುವುದಿಲ್ಲವೇ? ಯೇಸುಸ್ವಾಮಿಯವರ ಆಜ್ಞೆ (ಮತ್ತಾಯ 28:19-20)ಯನ್ನು ಪರಿಪಾಲಿಸಿ, ಆತನ ಶಿಷ್ಯರು ನಂತರದಲ್ಲಿ ಎಲ್ಲರ ತಲೆಯ ಮೇಲೆ ಕೈಯಿಟ್ಟು ದೀಕ್ಷಾಸ್ನಾನ ಮಾಡಿಸುತ್ತಿದ್ದರು. ಹೊಸದಾಗಿ ಕ್ರೈಸ್ತಧರ್ಮಕ್ಕೆ ಸೇರುವವರು, ಈಗಾಗಲೇ ಯೇಸುಸ್ವಾಮಿ ದೀಕ್ಷಾಸ್ನಾನದಲ್ಲಿ ಐಕ್ಯವಾಗಿದ್ದಲ್ಲಿ ಮತ್ತೆ ಏಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು? [ಎಲ್ಲರೂ ತಮ್ಮ ಪಾಪಗಳಿಗಾಗಿ ಯೇಸುಸ್ವಾಮಿಯ ಮರಣದಲ್ಲಿ ಮರಣಿಸಿದ್ದಾಗಿದ್ದರೆ, ಎಲ್ಲರೂ ರಕ್ಷಣೆ ಪಡೆದುಕೊಂಡಂತಾಯಿತು. ಆದರೆ ಸತ್ಯವೇದ ಹಾಗೆ ಹೇಳುವುದಿಲ್ಲ. ಎಲ್ಲರಿಗೂ ದೀಕ್ಷಾಸ್ನಾನ ಮಾಡಿಸುವಂತೆ ಯೇಸುಸ್ವಾಮಿ ಹೇಳಿದ್ದರಲ್ಲಿ ದೀಕ್ಷಾಸ್ನಾನದ ಆಯ್ಕೆಯೂ ಒಳಗೊಂಡಿದೆ.

ಯಾವಾಗ ನೀವು ಯೇಸುಸ್ವಾಮಿಯನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕಾರ ಮಾಡಿದಿರೋ ಆವಾಗಲೇ ನೀವು ಆತನ ಮರಣದಲ್ಲಿ ಪಾಲ್ಗೊಂಡಿದ್ದೀರಿ.] ದೀಕ್ಷಾಸ್ನಾನವನ್ನು ಅಂಗೀಕಾರ ಮಾಡಿಕೊಂಡಾಗ, – ಯೇಸುಸ್ವಾಮಿಯವರ ದೀಕ್ಷಾಸ್ನಾನದಲ್ಲಿ ಐಕ್ಯಗೊಳ್ಳುತ್ತೀರಿ.]

ಇ) **ಮತ್ತಾಯ 3:16–17ನ್ನು** ಓದಿಕೊಳ್ಳಿರಿ. ಯೇಸುಸ್ವಾಮಿಯರ ದೀಕ್ಷಾಸ್ನಾನದಲ್ಲಿ (ಮತ್ತು ನಮ್ಮ ದೀಕ್ಷಾಸ್ನಾನದಲ್ಲೂ) ಯಾರ್ಯಾರು ಪಾಲ್ಗೊಂಡಿದ್ದರು? [ತಂದೆಯಾದ ದೇವರು ಮತ್ತು ಪವಿತ್ರಾತ್ಮ ದೇವರು.]

1) ಯೇಸುಸ್ವಾಮಿ ದೀಕ್ಷಾಸ್ನಾನದ ಆಜ್ಞೆಯನ್ನು ಯಾಕೆ ಕೊಟ್ಟಾರೆಂಬುದು ಈಗಲಾದರೂ ಅರ್ಥವಾಯಿತೇ? [**ಮತ್ತಾಯ 28:29ನ್ನು ನೋಡಿರಿ.** ಅವರ ದೀಕ್ಷಾಸ್ನಾನದೊಂದಿಗೆ ನಮ್ಮದೂ ಪರಿಪೂರ್ಣವಾಗಿ ಹೊಂದಿಕೊಳ್ಳುತ್ತದೆ.]

## IV. ಶೋಧಿಸಲ್ಪಟ್ಟ ಮನುಷ್ಯನು

ಅ) **ಮತ್ತಾಯ 4:1–2ನ್ನು ಓದಿಕೊಳ್ಳಿರಿ**. ಈ ಕಾರ್ಯ ಯೇಸುಸ್ವಾಮಿ ದೀಕ್ಷಾಸ್ನಾನ ತೆಗೆದುಕೊಂಡ ತಕ್ಷಣದಲ್ಲಿಯೇ ಆರಂಭವಾಯಿತು. ಪವಿತ್ರಾತ್ಮ ದೇವರು ಆತನು ಸೈತಾನನಿಂದ ಶೋಧಿಸಲ್ಪಡುವದಕ್ಕಾಗಿ ಅಡವಿಗೆ ಒಯ್ದದ್ದು ಏಕೆ?

1) ನಿಮ್ಮ ಜೀವನದ ಆಧ್ಯಾತ್ಮಿಕ ಘಟನೆಗಳನ್ನು ಮೆಲುಕು ಹಾಕುವಾಗ, ನಿಮ್ಮ ದೀಕ್ಷಾಸ್ನಾನದ ದಿನಕ್ಕೆ ಯಾವ ಸ್ಥಾನವನ್ನು ಕೊಡುತ್ತೀರಿ?

2) ಉಪವಾಸ ಮಾಡುವುದರ ಔಚಿತ್ಯವೇನು? [**ಎಸ್ತೇರಳು 4:15ನ್ನು ಓದಿಕೊಳ್ಳಿ.]** ಯೆಹೂದಿಗಳನ್ನೆಲ್ಲಾ ಸಂಹಾರ ಮಾಡಲು ಹೊರಟಿದ್ದ ಹಾಮಾನನ್ನು ಸೋಲಿಸಲು ಎಸ್ತೇರಳು ಉಪಯೋಗಿಸಿದ ಮಹಾ ಅಸ್ತ್ರವಿದು. ಪ್ರಾಣಕ್ಕೆ ಅಪಾಯಕಾರಿಯೆನಿಸಿದ, ರಾಜದರ್ಶನವನ್ನು ಎದುರಿಸಲು ಆಕೆ ಆರಿಸಿಕೊಂಡದ್ದು ಉಪವಾಸ ಪ್ರಾರ್ಥನೆ.]

3) ನೀವು ಒಂದು ಸೈನ್ಯದ ಮಹಾದಂಡನಾಯಕನಾಗಿದ್ದರೆ, ಯುದ್ಧಭೂಮಿಯನ್ನು ನೀವು ಆರಿಸುತ್ತಿರೋ ಅಥವಾ ನಿಮ್ಮ ವಿರೋಧಿಯನ್ನು ಆರಿಸುವಂತೆ ಕೇಳಿಕೊಳ್ಳುತ್ತಿರೋ? [ಪವಿತ್ರಾತ್ಮ ದೇವರು ಯೇಸುಸ್ವಾಮಿಯನ್ನು ಸೈತಾನನಿಂದ ಶೋಧಿಸಲ್ಪಡುವದಕ್ಕೆ ಒಯ್ಯಲ್ಪಟ್ಟಾರು ಎಂಬ ಹೇಳಿಕೆಯನ್ನು ವಿವರಿಸಲು ಈ ಪ್ರಶ್ನೆಗಳಿಗೆ ನೀವು ಕೊಡುವ ಉತ್ತರ ಸಹಾಯಕಾರಿಯಾಗಿರಬಹುದು. ದೀಕ್ಷಾಸ್ನಾನ ಹಾಗೂ ಉಪವಾಸದಿಂದ ಆವರಿಸಲ್ಪಟ್ಟಿದ್ದ ಯೇಸುಸ್ವಾಮಿಯನ್ನು ಪವಿತ್ರಾತ್ಮ ದೇವರು ಸೈತಾನನೊಂದಿಗೆ ಹೋರಾಡಲು ಕರೆದೊಯ್ದರು.]

4) ಇಲ್ಲಿ ನಮಗೆ ಕಲಿಯಲು ಪಾಠವೇನಾದರೂ ಇದೆಯೇ? [ನಮ್ಮ ಆಲೋಚನೆಗಳನ್ನು ನಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಮೂಲಕ ಪಾಪದ ವಿರುದ್ಧ ಹೋರಾಡಲು ನಾವು ಸಿದ್ಧರಾಗಬೇಕು. ದೇವರ ವಾಕ್ಯವನ್ನು ಅರಿತುಕೊಂಡವರಾಗಿ, ನಾವು ಪಾಪದ ವಿರುದ್ಧ ಹೋರಾಡಲು ಸಿದ್ಧರಾಗಬೇಕು. ಪವಿತ್ರಾತ್ಮ ದೇವರಿಂದ ನಾವು ನಡೆಸಲ್ಪಡವರಾಗಬೇಕು. ಒಂದು ಹೋರಾಟ ನಮ್ಮ ವಿರುದ್ಧ ಸಿದ್ಧವಾಗುತ್ತಿದೆ ಎಂಬುದು ನಮ್ಮ ಅರಿವಿಗೆ ಬರುತ್ತಿದ್ದಂತೆ, ಉಪವಾಸದೊಡನೆ ಅದನ್ನು ಎದುರಿಸಲು ನಾವು ಸಿದ್ಧರಾಗಬೇಕು.]

ಆ) **ಮತ್ತಾಯ 4:3–4ನ್ನು ಓದಿಕೊಳ್ಳಿ**. ನೀವು ಸೈತಾನನೆಂದು ಮತ್ತು ಯೇಸುಸ್ವಾಮಿ ಪಾಪಮಾಡುವಂತೆ ನೀವು ಪ್ರಚೋದಿಸುತ್ತಿದ್ದೀರಿ ಎಂದು ಕಲ್ಪಿಸಿಕೊಳ್ಳಿ. ನಿಮ್ಮ ಮೊದಲ ಅಸ್ತ್ರಕ್ಕೆ ಅದೇಷ್ಟು ಆಲೋಚನೆ ಹಾಗೂ ಸಮಯವನ್ನು ಉಪಯೋಗಿಸುತ್ತೀರಿ.

1) ಸೈತಾನ ಈ ಹೋರಾಟಕ್ಕೆ ಸಿದ್ಧತೆ ಮಾಡಿಕೊಂಡಿರಲಿಲ್ಲ ಎಂದೆನಿಸುತ್ತದೆಯೇ? [ಹೌದು. ಯೇಸುವಿನ ಪರಿಸ್ಥಿತಿ ಹೇಗಿತ್ತೋ ಅದನ್ನು ಆಧರಿಸಿಯೇ ತನ್ನ ಯುದ್ಧ ಪ್ರಾರಂಭಿಸಿದ್ದಾನೆ. ಯೇಸುಸ್ವಾಮಿ ಈಗ ಹಸಿದಿದ್ದರು. ದೇವರ ಮೇಲೆ ನಂಬಿಕೆಯಿಟ್ಟು ಪ್ರಾರ್ಥನೆ ಮಾಡುತ್ತಿದ್ದರು. ಇಲ್ಲಿಂದಲೇ ಆತನ ಶೋಧನೆ ಪ್ರಾರಂಭವಾಗಿದೆ. ಕಲ್ಲು ರೊಟ್ಟಿಯಾಗುತ್ತದೆ ಎಂದು ನಂಬುವದು ಅಷ್ಟು ಸುಲಭವಲ್ಲ. ಇದೇ ಉತ್ತಮ ಶೋಧನೆಯೆಂದು ಸೈತಾನ ನೆನೆಸಿರಬಹುದು.]

2) ಆದಾಮ ಮತ್ತು ಹವ್ವಳ ಶೋಧನೆಯೊಂದಿಗೆ ಹೋಲಿಸಿ ನೋಡಿ ಯೇಸುಸ್ವಾಮಿಯವರಿಗಾದ ಈ ಶೋಧನೆಯನ್ನು ವಿವರಿಸಿರಿ. [ಅಲ್ಲಿ ಅಹಂಕಾರವಿತ್ತು (ತಾನು ದೇವರ ಹಾಗೆಆಗಬೇಕು) ಮತ್ತು ಸಂಶಯವಿತ್ತು. (ದೇವರು ಒಳ್ಳೆಯದು ನನಗೆ ಲಭಿಸದಂತೆ ಮಾಡುತ್ತಿದ್ದಾರೆ.)]

ಇ) ಮತ್ತಾಯ 4:5–6ನ್ನು ಓದಿಕೊಳ್ಳಿ. ಯೇಸುಸ್ವಾಮಿಯವರಿಗೆ ಈ ಶೋಧನೆ ಎಷ್ಟು ಕಷ್ಟವಾಗಿತ್ತು ಎಂಬ ಪ್ರಶ್ನೆಗೆ ನಿಮ್ಮ ಉತ್ತರವೇನು?

1) ನಿಮ್ಮ ಜೀವನದಲ್ಲಿ ಬಂದ ಶೋಧನೆಗಳ್ಳೊಂದಿಗೆ ಇದನ್ನು ಹೋಲಿಸಿ ನೋಡಿರಿ. [ಸೈತಾನ ಯೇಸುಸ್ವಾಮಿಗೆ ಒಂದು ಅಡ್ಡದಾರಿಯನ್ನು ತೋರುತಿದ್ದಾನೆ. ಈ ದಾರಿಯಲ್ಲಿ ಹೋಗಿದ್ದರೆ ಎಲ್ಲಾ ಕಷ್ಟತೊಂದರೆಗಳಿಂದ ಮತ್ತು ನೋವುಗಳಿಂದ ತಪ್ಪಿಸಿಕೊಳ್ಳಬಹುದಾಗಿತ್ತು. ನಮ್ಮ ಪಾಠವೇ ಯೇಸುಸ್ವಾಮಿಯ ಮೂಲಕ ದೊರೆಯುವ ನೀತಿಯನ್ನು ಕುರಿತದ್ದಾಗಿದೆ. ಯೇಸುಸ್ವಾಮಿ ಮತ್ತಾಯ 5:48ರಲ್ಲಿ ಏನು ಹೇಳಿದ್ದಾರೋ ಅದನ್ನು ಮರೆಯದಿರೋಣ. ಪರಿಶುದ್ಧರಾಗಿರಲು ಪ್ರಯತ್ನಿಸೋಣ. ತಂದೆಯಾದ ದೇವರು ದೋಷರಹಿತರಾಗಿರಲು ಪ್ರಯತ್ನಿಸೋಣ. ತಂದೆಯಾದ ದೇವರು ದೋಷರಹಿತರಾಗಿರುವಂತೆಯೋ ನಾವು ದೋಷರಹಿತರಾಗಿರೋಣ.

ಪರಿಶುದ್ಧರಾಗಿರಲು ಸೈತಾನನ ಮತ್ತೊಂದು ಅಡ್ಡದಾರಿ ಯೇಸುಸ್ವಾಮಿಯಗೆ ಒಡ್ಡಿದ ಮೂರನೇ ಶೋಧನೆಯಲ್ಲದೆ.]

ಈ) ಸ್ನೇಹಿತನೇ, ನೀನು ಯೇಸುಸ್ವಾಮಿಯವರ ದೀಕ್ಷಾಸ್ನಾನದಲ್ಲಿ, ಸಾವಿನಲ್ಲಿ ಮತ್ತು ಪುನರುತ್ಥಾನದಲ್ಲಿ, ಆತನಲ್ಲಿ ನಂಬಿಕೆಯಿಟ್ಟಾಗ ಐಕ್ಯಗೊಳ್ಳುವಿ. ಪವಿತ್ರಾತ್ಮ ದೇವರಿಂದ ನಡೆಸಲ್ಪಟ್ಟು, ದೇವರಿಗೆ ಮೆಚ್ಚಿಗೆಯಾಗುವಂತಹ, ಯೇಸುಸ್ವಾಮಿಯವರ ಜೀವನ ಶೈಲಿಯನ್ನು ನಿನ್ನ ಜೀವನದಲ್ಲಿ ಅಳವಡಿಸಿಕೊಳ್ಳುವಿಯಾ?

## V. ಮುಂದಿನ ವಾರ : ರಕ್ಷಣೆಯ ಸಂಕೇತಗಳು.